Regd No B G. 155

Sri

24—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸಂಪಾದಕರು— ಅಂಬಾಳೆ ಸಿಂಸ್ಕೆದಾರ್ ಎಂ ವಿ ಸುಬ್ಬಂಶಾಯಿರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾ

ಲಾರಿಚಾರ್ಜ್

ಜಯಪುರ— ವಿದ್ಯಾರ್ಥಿಗಳ ಭಾಷಣವಾಗಬೇಕಾಗಿದ್ದ ಒಂದು ಸಭೆ ಎದುರು ಪ್ರದರ್ಶನ ನಡೆಸಿದವರ ಮೇಲೆ ಪೋಲೀಸರು ಲಾಠಿ ಚಾರ್ಜ್ ಮಾಡಿದರು ; ಕೆಲವರು ಗಾಯಗೊಂಡರು.

★

ವಿವಾಹದ ಹಾವಳಿ

ಮಚಲೀ ಪಟ್ಟಣ — ಕೃಷ್ಣಾನದಿಯ ಪ್ರವಾಹ ಉಕ್ಕಿ ಪುಲ್ಲಡಿ ನೀರು ಶೇಖರ ಸ್ಥಾನದಲ್ಲಿ ನೀರು ತುಂಬಿ ಮೇಲೆ ಹರಿಯುತ್ತಿದೆ.

★

ಬಚ್ಚಿಟ್ಟ ಹಣದ ಶೋಧ

ಮುದಿಕೇರಿ (ಕರ್ನೂಲು ಜಿಲ್ಲ)— ವಿಷವಿಶ್ರಿತ ಆಹಾರದಿಂದ ಸ್ಕೂಲು ಮಕ್ಕಳು ಸಾಯುತ್ತಿದ್ದರಿಂದ ಇಲ್ಲಿಯ ಎಲ್ಲ ಶಾಲೆಗಳನ್ನೂ ಮುಚ್ಚಲಾಗಿದೆ.

★

ಸ್ಕೂಲುಗಳ ಬಂದ್

ಕಾವಲಪುರ — ಬಚ್ಚಿಡಲ್ಪಟ್ಟಿರುವ ಹಣ ಮತ್ತು ಅಕ್ರಮ ಪದಾರ್ಥಗಳ ಪತ್ತೆಗಾಗಿ ಅನೇಕ ಕಡೆ ಧಾಳಿ ನಡೆಸಲಾಗಿದ ; ಕೆಲವು ಸಂಸ್ಥೆಗಳಿಗೆ ಬೀಗ ಮುದ್ರೆ ಹಾಕಲಾಗಿದೆ.

★

ಅಂಗೀಕಾರ ಮುದ್ರೆ

ನವದೆಹಲಿ— 1964 ರ ಮೈಸೂರು ಸಹಕಾರಿ ಸಂಘಗಳ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿಗಳು ತಮ್ಮ ಅಂಗೀಕಾರ ಮುದ್ರೆಯನ್ನು ನೀಡಿದ್ದಾರೆ

ನಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಅನಂತಾನ ಮಹಾವಿದ್ವಾನ್. ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

25 ಶಕ್ರವಾಂ ಜಾತಿ ಭಂಡಿ

ಘಟ್ಟಗ ಪೋಸುಮೆ

ರೋಂ— ಗ್ಲೋವಾನಿ ಟ್ರುಚ್ಚಿ ಎಂಬ ಪೋಸ್ಟ್‌ಮನ್ನನ ಮನೆಯನ್ನು ಪೋಲೀಸರು ಶೋಧಿಸಲು ವಿಳಾಸದಾರರಿಗೆ ತಲಪಿಸದಿದ್ದ 15 ಸಾವಿರ ಕಾಗದ, 25 ಸಾವಿರ ಕಾರ್ಡುಗಳು, ಡಜನ್‌ಗಟ್ಟಿ ಪೋಸ್ಟಲ್ ಆರ್ಡರುಗಳು, ರಾಶಿರಾಶಿ ಪತ್ರಿಕೆಗಳು ಪತ್ತೆಯಾಯಿತು ; ವಿಳಾಸದಾರರಿದ್ದ ಮಹಡಿಗಳಿಗೆ ಹತ್ತಿ ಹೋಗಲು ತೈಲಾಗುತ್ತಿಲ್ಲವೆಂದು ಅವನ್ನು ಹೇಳಿದನು : ಪೋಲೀಸರು ಶೋಧನೆ ನಡೆಸಿದ ಮಾರನೇ ದಿನ ಅವನು ಸತ್ತು ಹೋದನು.

★

ಚಿನ್ನದ ಹತೋಟಿ ಉಲ್ಲಂಘನೆ

ಬೊಂಬಾಯಿ— ಇಲ್ಲಿನ ಪ್ರಸಿದ್ಧ ಕೈಗಾರಿಕೋದ್ಯಮಿಯೊಬ್ಬರು ತಮ್ಮ ಮನೆಯ ಭೂಗತ ಕಬ್ಬಿಣ ಪೆಟ್ಟಿಗೆಯಲ್ಲಿ ರೂ 192000 ಮೌಲ್ಯದ 6382 ಗ್ರಾಂ ಚಿನ್ನದ ಗಟ್ಟಿಗಳು ಮತ್ತು 3927 ಪವನ್ನು ಹೊಂದಿದ್ದಕ್ಕೆ ಅವರ ಮೇಲೆ ಮೊಖದ್ದಮೆ ಹಾಕಲಾಗಿದೆ.

ಪೌರಸಭೆ

ಮೈಸೂರು:— ಪೌರಸಭೆಯ ಸಾಧಾರಣ ವಿಶೇಷ ಸಭೆ ತಾ | 29 ಗುರುವಾರ ಸಂಜೆ 4 ಗಂಟೆಗೆ ನಡೆಯುವುದು.

★

ಶ್ರೀನಗರ— ಕಾಶ್ಮೀರದ ಮಾಜಿ ಪ್ರಧಾನಿ ಭಕ್ಷಿ ಗುಲಾಂ ಮೊಹಿತಾ 4 ಶಾಸನಸಭಾ ಸದಸ್ಯರು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸು ನೇರೆ ಬಂಧಿಸಲ್ಪಟ್ಟಿದ್ದಾರೆ.

★

ನವದೆಹಲಿ— ಪಾರ್ಲಿಮೆಂಟಿನ 50 ಮಂದಿ ಸದಸ್ಯರು ರಾಜುಮಾಡಿ ಶ್ರೀ ಸಂಜೀವ ರೆಡ್ಡಿಯವರನ್ನು ಮಂತ್ರಿಮಂಡಲದಿಂದ ತೆಗೆಯಬೇಕೆಂಬ ವಿನಂತಿಪತ್ರವನ್ನು ಪ್ರಧಾನಿಗಳಿಗೆ ಕೊಡಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ

ಮೈಸೂರು— ನಿನ್ನೆ ಸಂಜೆ ಸಂಯುಕ್ತ ಸೋಷಲಿಷ್ಟ ಪಕ್ಷದ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ನಾಯಕರು ಮಾತನಾಡಿ— ನಾಳೆಯಿಂದ ಮಳಿಗೆಗಳ ಮುಂದೆ ರೂಗೆ 2 ಕಿಲೋಗೆ ಕಡಮೆಯಿಲ್ಲದೆ ಮಾಂಸವಾಗಲೂ ಸತ್ಯಾಗ್ರಹ ನಸಿಸುವದಾಗಿಯೂ, ಅವಶ್ಯ ಬಿದ್ದರೆ ಆಹಾರಧಾನವನ್ನು ವಶಪಡಿಸಿಕೊಂಡು ಮಾರಾಡಿಸುವುದಾಗಿಯೂ ತಿಳಿಸಿದರು : ತಾ|| 25 ರಂದು ಸಂಪೂರ್ಣ ಹರತಾಳ ನಡೆಸಲೂ ಕೋರಲಾಯಿತು.

ಮೈಸೂರು ಜಿಲ್ಲಾ ಅವಶ್ಯಕತೆಗಳು

ಜಿಲ್ಲಾ ಕಾಂಗ್ರೆಸ್ಸು ಆಫೀಸಿನಲ್ಲಿ ಸೋಮವಾರ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ, ಮೈಸೂರು ಜಿಲ್ಲಾ ಕಾಂಗ್ರೆಸ್ಸಿನ ಅಶ್ರಯದಲ್ಲಿ ತಾ || 7 ನಡೆಸಿದ ಎಸಾಟಿಂಗಿನಲ್ಲಿ ಮೈಸೂರು ಜಿಲ್ಲೆಯಲ್ಲಿ ನೀರಾವರಿ ಮತ್ತು ಕೈಗಾರಿಕೆಗಳ ಬಗ್ಗೆ ಆಗಬೇಕಾದ ಕಾರ್ಯಗಳನ್ನು ಪಂಚಾಲೋಚಿತ ಕಾರ್ಯಗಳು ನೆಂವೇರಲು ಮುಖ್ಯ ವಿಚಾರಗಳನ್ನು ಅಧ್ಯಕ್ಷರೂ ಉಪಾಧ್ಯಕ್ಷರೂ ಪತ್ರಿಯವರಿಗೆ ವಿವರಿಸಿದರು. ಜಿಲ್ಲಾ ಅಭಿವೃದ್ಧಿಗೆ ಅವೆಲ್ಲವೂ ನೆರವೇರುವುದು ಅಗತ್ಯವಾಗಿದೆ.

★

ದೇಶದ್ರೋಹಿಗಳಿಗೆ ಶಿಕ್ಷೆ

ಕಲ್ಕತ್ತಾ— ಪಾಕಿಸ್ತಾನಕ್ಕೆ ಸಹಾಯಕವಾಗಿ ದೇಶದ್ರೋಹ ಕಾರ್ಯ ಮಾಡಿದ ಅಡ್ವೊಕೇಟ್ ಹುರಿಹರ್ ಹುಸೇನ್ ಮತ್ತು ಬೈಪಿಸ್ಟ ಕೃಷ್ಣದಾಸ ಮುಖರ್ಜಿಯವರಿಗೆ ತಲಾ 2 ವರ್ಷ ಕಠಿಣ ಸಜೆ ಮತ್ತು ರೂ 1000 ಜುಲ್ಮಾನೆ ವಿಧಿಸಲಾಯಿತು

ವಿವಿಧ ವಿಷಯಗಳು

ಕಾಂಚೀಪುರ — ಕಾಮಕೋಟಿ ಪೀಠದ ಜಗದ್ಗುರು ಶಂಕರಾಚಾರ್ಯರು ಸ್ಥಾಪಿಸಿರುವ ಮೂರನೇ ಆಗಮ, ಶಿಲ್ಪ ವಾಸ್ತು ಭಾರತ ಸಮಾರಂಭವನ್ನು ಮೊನ್ನೆ ಉದ್ಘಾಟಿಸುತ್ತಾ, ಮದರಾಸು ಗೌರ್ನರು ಶ್ರೀ ಜಯಚಾಮರಾಜ ಒಡೆಯರವರು— ಭಾರತದ ಕಲಾ ಮತ್ತು ಸಂಸ್ಕೃತಿಯು ಪುನರುತ್ಥಾನವಾಗಬೇಕೆಂದು ಹೇಳಿದರು ; ಆಗಮ, ಶಿಲ್ಪ ಶಾಸ್ತ್ರಗಳ ಗ್ರಂಥಕರ್ತನಿಲ್ಲದ ವೇದದ ಆಧಾರದ ಮೇಲಿದ್ದು ಭಗವಂತನನ್ನು ಸಾಕ್ಷಾತ್ಕರಿಸಲು ಮಾನವನಿಗೆ ಸಹಾಯಕವಾಗಿದೆಯೆಂದೂ ಹೇಳಿದರು.

....

ದೊಡ್ಡಬಳ್ಳಾಪುರದಲ್ಲಿ 7 ಅಂಗಡಿಗಳ ಮೇಲೆ ಧಾಳಿ ನಡೆಸಿ ಸೆಂಟ್ರಲ್ಲು ಎಕ್ಸೈಜಿನವರು 5 ಲಕ್ಷ ರೂಗಳ ಮೌಲ್ಯದ ರೇಷ್ಮೆಯನ್ನು ವಶಪಡಿಸಿಕೊಂಡು ಕೆಲವರನ್ನು ಬಂಧಿಸಲಾಯಿತು

—

ವಿಶಾಂತಿನಲ್ಲಿ ಶ್ರೀ ಗಣಪತಿ ವಿಸರ್ಜನೆ ಮೆರವಣಿಗೆ ಹೋಗುತ್ತಿದ್ದಾಗ ಸ್ಫೋಟವಾಗಿ 7 ಮಂದಿ ಗಾಯಗೊಂಡರು

★

ನವದೆಹಲಿ— ಖಾರಿ ಬೆಳೆಯು ಆಹಾರ ಧಾನ್ಯಗಳ ಬೆಲೆಯು ಅಕ್ಟೋಬರ್ 15 ರ ನಂತರ ಭಾರತ ಸರಕಾರದಿಂದ ಪ್ರಕಟಿಸಲಾಗುವುದು

★

ಜಂಡೀಘರ— ಪಂಜಾಬಿನಿಂದ ದೇಶದ ಇತರ ರಾಜ್ಯಗಳಿಗೆ ಧಾನ್ಯ ಮತ್ತು ಧಾನ್ಯ ಪದಾರ್ಥಗಳ ರಫ್ತನ್ನು ಕ್ರಮಬದ್ಧಗೊಳಿಸಿದೆ

★

ನವದೆಹಲಿ— ಭಾರತದ ಶಾಂತಿ, ಶಾಸ್ತ್ರ ಮತ್ತು ವಿಶ್ವವಿಚಾರದಲ್ಲಿ ಶಾಂತಿಯುತ ಸಹಬಾಳ್ವೆ ನೀತಿಯನ್ನು ಮುಂದುವರಿಸುವುದೆಂದು ಮೊನ್ನೆ ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಸ್ವಾತಂತ್ರ್ಯ ವೀರರು —

ಕುವರ ಸಿಂಹ — ಅಜೇಯನಾಗಿ ಮೆರೆದನು

ಬ್ರಿಟಿಷರಿಂದ 50000 ರೂಗಳ ಬೆಲೆ ಕಟ್ಟಲ್ಪಟ್ಟ ರಂಡವನ್ನು ಹೊತ್ತ ಧೀರಯೋಧ ಕುವರ ಸಿಂಗನು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೋರಿದ ಸಾಹಸ ಅಸಾಧಾರಣವಾದುದು. ಬೇಹಾರಿನ ಶಹಬಾದು ಜಿಲ್ಲೆಯ ಜಗದೀಶಪುರದ ಒಡೆಯನಾದ ಕುವರಸಿಂಹನು ಬ್ರಿಟಿಷರನ್ನು ಬಿಹಾರಿನಲ್ಲಿ ಸಿಕ್ಕಸಿಕ್ಕಲ್ಲಿ ಸೆದೆಬಡಿದು ಪಲಾಯನಗೈಸಿದನು : ಸೇನಾಪತಿ ಡಗ್ಲಸ್‌ನ ಮುಂದಾಳುತನದಲ್ಲಿದ್ದ ಬ್ರಿಟಿಷ ಸೈನ್ಯವು ಕುವರಸಿಂಹನ ಪರಾಕ್ರಮದಿಂದು ಧೂಳೀಪಟವಾಗಿ ಹೋಯಿತು : ಆರ್ರಾ ಪಟ್ಟಣವು ಅವನ ಕೈವಶವಾಯಿತು : ಲಕ್ನೋದಕ್ಕೆ ಸಾಗುತ್ತಿದ್ದ ವಿಲ್ಸನ್ನರ ಅಪಾರ ಸೈನ್ಯವನ್ನು, ಕುವರಸಿಂಹನು ತನ್ನವರೊಂದಿಗೆ ಕೂಡಿ, ಪ್ರತಿಭಲಿಸಿ, ಸೋಲಿಸಿ, ಓಡಿಸಿದನು : ಇಷ್ಟಲ್ಲೇ ಬ್ರಿಟಿಷರು ಸೈನಿಕರಿಗೆ ಕುವರಸಿಂಹನು ಸಿಂಹಪ್ರಾಯನಾದನು ; ಅವನ ಖ್ಯಾತಿ ಸಂಯುಕ್ತಪ್ರಾಂತ್ಯದಾದ್ಯಂತ ಕಾಡ್ಗಿಚ್ಚಿನಂತೆ ಹಂಡಿತು.

ಮುಂದೆ ಕರ್ನಲ್ ಜೇಮ್ಸ್‌ನ ಅಪಾರ ದಂಡು, ಕುವರಸಿಂಹದ ಸಂಗಾತಿಗಳನ್ನು ಎದುರಿಸಲಾರದೆ ಸೋಲೊಪ್ಪಿ ಅಜಂಗಡವನ್ನು ಕುವರಸಿಂಹನಿಗೊಪ್ಪಿಸಿದನು ; ವಿಜಯೋತ್ಸಾಹದಿಂದ ಕುವರಸಿಂಹನು ಕಾತಿಯತ್ತ ತನ್ನ ಸೈನ್ಯವನ್ನು ಮುನ್ನಡೆಸಿ, ವೈಸರಾಯ್ ಕ್ಯಾನಿಂಗು ಕಳುಹಿಸಿದ ಲಾರ್ಡ್ ಮಾರ್ಕ್ಹನ ತೊಂಭತ್ತು ಸಜ್ಜಿತ ಬಲಿಷ್ಠ ಸೇನಾ ತುಕಡಿಯನ್ನು ಮಣ್ಣುಮುಕ್ಕಿಸಿದನು.

ವಿಜಯಯಾತ್ರೆಯನ್ನು ಮುಂದರಿಸಿದ ಕುವರ ಸಿಂಹನು ಗೋರಖ್‌ಪುರ ಜಿಲ್ಲೆಯ ವನೋಹರ ಗ್ರಾಮದಲ್ಲಿ ವಿಶ್ರಾಂತಿಗಾಗಿ ಶಿಬಿರವೂರಿದಾಗ ಬ್ರಿಟೀಷ ಸೇನಾನಿ ಮಿಗ್ಹಾಸನು ಅಕಸ್ಮಾತ್ತಾಗಿ ಧಾಳಿ ನಡೆಸಿದನು : ಸ್ವಾತಂತ್ರ್ಯ ಯೋಧರು ಪರಾಕ್ರಮದಿಂದ ಕಾದಿದರೂ ಇಂಗ್ಲೀಷರ ಕೈಯೇ ಮೇಲಾಯಿತು : ಯುದ್ಧದಿಂದ ಹಿಂದೆ ಸರಿಯುತ್ತಿದ್ದ ಕುವರಸಿಂಹನ ಬಲಗೈಗೆ ಗುಂಡೊಂದು ನಾಟಲು ಕುವರಸಿಂಹನು ಆ ಕೈಯನ್ನೇ ಕತ್ತರಿಸಿ ಬಿಸಾಟನು.

ಎಂಟು ತಿಂಗಳ ಅವಿಶ್ರಾಂತ ಹೋರಾಟದ ಬಳಿಕ 1858 ಏಪ್ರಿಲ್ 22 ರಂದು, ವಿಜಯಶಾಲಿಯಾಗಿ ಕುವರಸಿಂಹನು ತನ್ನ ಊರಾದ ಜಗದೀಶಪುರವನ್ನು ಪ್ರವೇಶಿಸಿದಾಗ ಅವನಿಗೆ ಪ್ರಜೆಗಳಿಂದ ಸಂಭ್ರಮ ಸ್ವಾಗತ ದೊರೆಯಿತು ; ಸೋಲಿನಿಂದ ಖಿನ್ನಿಗೊಂಡ ಬ್ರಿಟೀಷರು ಕುವರಸಿಂಹನನ್ನು ಬಗ್ಗುಬಡಿಯಲೆಂದು ಇನ್ನೊಂದು ಸೈನ್ಯವನ್ನು ಕಳುಹಿಸಿದರು ; ಆದರೆ ಇದರ ಗತಿಯು ಹಿಂದಿನಂತೆಯೇ ಆಯಿತು ; ಕುವರಸಿಂಹನ ಯೋಧರ ಪ್ರಖರ ಪರಾಕ್ರಮದೆದುರು ಬ್ರಿಟಿಷ ಸೈನಿಕರು ತಲೆಬಾಗಲೇ ಬೇಕಾಯಿತು.

1858 ಏಪ್ರಿಲ್ 23 ರಂದು ಜಗದೀಶಪುರವು ಸ್ವತಂತ್ರವಾಗಿ ಮೆರೆಯಿತು : ಆತನ್ಮಧ್ಯೆ ಕುವರಸಿಂಹನ ಕೈ ನೋವು ಪ್ರಬಲಿಸಿ ಸ್ವಲ್ಪವೇ ಸಮಯದಲ್ಲಿ ಬ್ರಿಟಿಷರಿಗೆ ಸೋಲಿನ ಸವಿಯುಣ್ಣಿಸಿ ಅಜೇಯನಾಗಿ ಉಳಿದ ಆ ಧೀರಯೋಧನು ವಿಂಶ್ವರ್ಗವನ್ನೇರಿದನು. (ಮಂ. ಪ್ರ)

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Advertise in

The Oldest Newspaper in the State

Sri 'SATYAVADI' Daily

Chamarajapuram, Mysore 4

ವುಡ್‌ಲ್ಯಾಂಡ್ ಜನಭರಿತ 2 ನೇ ವಾರ

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದ್ರ, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಅಪೆರಾ— 18-9-64 ರಿಂದ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾನರ್

ತಾರಾಗಣ— ಮಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI SUDHA

Superb Tonic

Help The ' Gorakshana'

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ

" ಗೋರಕ್ಷಣ " ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ನವೀಕರಣ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4